



## ನಕ್ಕುಬಿಡಿ

ಬೀಚಿಯವರು ಹೇಳಿದ್ದು
ಎಮ್ಮೆ ಮತ್ತು ಎಮ್ಮೆಲ್ಲೆ (mla) ಗೆ ಇರುವ ವ್ಯತ್ಯಾಸ ಏನು..?
ಎಮ್ಮೆ ನಿಂತಲ್ಲೇ ಮೇಯುತ್ತೆ.
ಎಮ್ಮೆಲ್ಲೆ ಊರೆಲ್ಲಾ ಮೇಯ್ತಾನೆ...

★★★

ಮೇಷ್ಟ್ರು: ದಿನಾ ಒಂದು ಲೋಟ ಹಸುವಿನ ಹಾಲು ಕುಡೀರಿ, ನಿಮ್ಮ ಬುದ್ಧಿಶಕ್ತಿ ಬೆಳೆಯುತ್ತೆ.

ಸೀನ: ಸುಮ್ನಿರಿ ಸಾರ್... ನೀವು ಹೇಳೋ ಮಾತು ನಿಜ ಆಗಿದ್ರೇ ಕರು ಇಷ್ಟೊತ್ತಿಗೆ scientist ಆಗ್ತಿತ್ತು.

★★★

ಗುಂಡ: ಈ ಪೇಂಟಿಂಗ್ ನ ಬೆಲೆ ಎಷ್ಟು?

ಚಿತ್ರಗಾರ: 5 ಲಕ್ಷ, ಇದು ತೈಲವರ್ಣದಲ್ಲಿ ರಚಿಸಿರುವುದು.

ಗುಂಡ: ದುಡ್ಡಿನ ಯೋಚನೆ ಮಾಡಬೇಡಿ. ತುಪ್ಪವರ್ಣದಲ್ಲಿ ರಚಿಸಿರೋದು ಇದ್ದರೆ ತೋರಿಸಿ.

(ಸಂಗ್ರಹ):**ಪೂರ್ಣಿಮಾ ರವೀಂದ್ರನಾಥ್ ಹೆಜಮಾಡಿ**

ನ್ಯಾಯಾಧೀಶ: (ಆರೋಪಿಯನ್ನು ಕುರಿತು) ನೀನು ಕಾರನ್ನು ನಿಧಾನವಾಗಿ ಚಲಾಯಿಸುತ್ತಿದ್ದೆ ಎನ್ನುವುದಕ್ಕೆ ನಿನ್ನಲ್ಲಿ ಏನು ಪುರಾವೆ ಇದೆ?

ಆರೋಪಿ : ಸಾರ್, ನಾನು ತವರಿನಲ್ಲಿದ್ದ ನನ್ನ ಹೆಂಡತಿಯನ್ನು ಕರೆತರಲು ಹೊರಟಿದ್ದೆ

ನ್ಯಾಯಾಧೀಶ: ಹೀಗೋ ವಿಷಯ, ಹಾಗಾದರೆ ನೀನು ನಿರಪರಾಧಿ. ನಿನ್ನನ್ನು ಖುಲಾಸೆ ಮಾಡ್ತಿದ್ದೇನೆ.

★★★

ಹೆಂಡತಿ ಐಸಿಯು ನಲ್ಲಿದ್ದಳು. ಡಾಕ್ಟರ್ ಅವಳ ಪತಿಗೆ ಹೇಳಿದರು: ನಾವು ತುಂಬ ಪ್ರಯತ್ನಿಸುತ್ತಿದ್ದೇವೆ, ಆದರೆ ಅವಳು ಚಿಕಿತ್ಸೆಗೆ ಸ್ಪಂದಿಸುತ್ತಿಲ್ಲ. ಬಹುಶಃ ಕೋಮಾಕ್ಕೆ ಹೋಗಿರಬಹುದೆಂದು ತೋರುತ್ತದೆ. ಈಗ ಎಲ್ಲವೂ ದೇವರ ಕೈಯಲ್ಲಿದೆ.

ಪತಿ: ಇಂತಹ ಕಾಯಿಲೆ ಬರಲು ಅವಳ ವಯಸ್ಸಾದರೂ ಎಷ್ಟು? ಈಗ ತಾನೆ ಅವಳಿಗೆ 40 ತುಂಬಿದೆ.

ಪತಿ ಇಷ್ಟು ಹೇಳುತ್ತಲೇ ಒಂದು ಚಮತ್ಕಾರ ಜರುಗಿತು. ಅವಳ ಹೃದಯಗತಿಯ ವೇಗ ಹೆಚ್ಚಿತು. ಕೈ ಬೆರಳುಗಳು ಅಲ್ಲಾಡಿದವು. ತುಟಿಗಳು ಅದುರಿದವು.

ಅದರಿಂದ ಒಂದು ಕ್ಷೀಣವಾದ ಧ್ವನಿ ಹೊರಟಿತು– ರೀ 40 ಅಲ್ಲಾರಿ 30.

★★★

ಓ.ಎಲ್.ಎಕ್ಸ್ ನಲ್ಲಿ ಕಾಣಿಸಿಕೊಂಡ ಒಂದು ಜಾಹೀರಾತು: ಮದುವೆಯ ಹೊಸ ಸೂಟ್ ಮಾರಾಟಕ್ಕಿದೆ. ಸೂಟ್ ಒಳ್ಳೆಯ ಕಂಡೀಷನ್‌ನಲ್ಲಿದೆ. ಕೇವಲ ಒಂದು ಬಾರಿ ಧರಿಸಿದ್ದು– ಅದೂ ತಪ್ಪಿನಿಂದಾಗಿ.

★★★

ಹೊಸದಾಗಿ ಮದುವೆಯಾದ ಗಂಡು ತನ್ನ ನವವಿವಾಹಿತ ಪತ್ನಿಯನ್ನು 'ಇಂಪ್ರೆಸ್' ಮಾಡಲು ಇಂಗ್ಲಿಷ್ ಪತ್ರಿಕೆಯನ್ನು ಕೈಗೆತ್ತಿಕೊಂಡು 'ಸರ್ಕಾರಿ ಸಾರಿಗೆ ಬಸ್ ಪಲ್ಟಿಯಾಗಿದೆ' ಎಂಬ ಸುದ್ದಿಯನ್ನೋದಿದ!

ಪತ್ನಿ ಹೇಳಿದಳು– ಪಲ್ಟಿಯಾದದ್ದು ಸಾರಿಗೆ ಬಸ್ಸಲ್ಲ ನೀವು ಹಿಡಿದಿರುವ ಪತ್ರಿಕೆ!

★★★

ಡಾಕ್ಟರ್: ನಾನು ಹೇಳಿದಂತೆ ನೀನು ಕಿಟಕಿಯನ್ನು ತೆರೆದಿಟ್ಟು ಮಲಗಿದ್ದಿಯಾ?

ರೋಗಿ : ಹೌದು ಡಾಕ್ಟ್ರೇ, ಕಿಟಕಿಯನ್ನು ತೆರೆದಿಟ್ಟೇ ಮಲಗಿದ್ದೆ.

ಡಾಕ್ಟರ್: ಹಾಗಾದರೆ ನಿನ್ನ ಜ್ವರ ಕಣ್ಮರೆಯಾಗಿರಬೇಕಲ್ಲ?

ರೋಗಿ: ಇಲ್ಲ ಡಾಕ್ಟ್ರೇ ನನ್ನ ಜ್ವರ ಕಣ್ಮರೆಯಾಗಲಿಲ್ಲ. ನನ್ನ ಮೊಬೈಲ್ ಹಾಗೂ ಲ್ಯಾಪ್‌ಟಾಪ್ ಕಣ್ಮರೆಯಾಗಿವೆ.

(ಸಂಗ್ರಹ): **ಮುರಲೀಧರ ಕುಲಕರ್ಣಿ,**


ಶ್ರೀ ರಾಘವೇಂದ್ರ ಜ್ಯೋತಿಷ್ಯಾಲಯ



ಪಂಡಿತ
ಶ್ರೀ ಎಂ. ಬಿ. ಜೋಶಿ
ಪ್ರಸಿದ್ಧ ಜ್ಯೋತಿಷ್ಯರು
ಶ್ರೀ ರಾಘವೇಂದ್ರ ಸ್ವಾಮಿ ಉಪಾಸಕರು
ಶ್ರೀ ಚೌಡೇಶ್ವರಿದೇವಿ ಆರಾಧಕರು
9611002265
ಹಸ್ತ ರೇಖೆ, ಮುಖ ಲಕ್ಷಣ ಮತ್ತು ಭಾವಚಿತ್ರದ ಮೇಲೆ ನಿಮ್ಮ ಭವಿಷ್ಯವನ್ನು ನಿಖರವಾಗಿ ನುಡಿಯುತ್ತಾರೆ. ವಿದ್ಯೆ, ಪರೀಕ್ಷೆ, ಉದ್ಯೋಗ, ಪ್ರಮೋಶನ್, ವಿದೇಶ ಪ್ರವಾಸ, ಪ್ರೇಮ ಪ್ರಕರಣ ಸಂತಾನ ಪ್ರಾಪ್ತಿ, ಸಾಲ ಮುಕ್ತಿ, ರೋಗಗಳು ಲಕ್ಷ್ಮೀ ಯೋಗ, ಭಾಗ್ಯೋದಯ, ಸ್ತ್ರೀವಶೀಕರಣ, ಪುರುಷ ವಶೀಕರಣ ಮಾಟ-ಮಂತ್ರ ನಿವಾರಣೆ, ಮದುವೆ, ಅಡ-ತಡೆ, ನ್ಯಾಯಾಲಯ ಪ್ರಕರಣಗಳು, ವಿವಾಹ ವಿಚ್ಛೇದನ ಮುಂತಾದ
ಇನ್ನೂ ಅತೀ ಜಟಿಲ ಸಮಸ್ಯೆಗಳಿಗೆ ಅತೀ ಶೀಘ್ರ ಪರಿಹಾರ ಮಾಡುತ್ತಾರೆ.
ಅನೇಕ ರಾಜಕೀಯ ಗಣ್ಯರು, ಉದ್ಯಮಿಗಳು, ನೌಕರಸ್ಥರು, ಜೋಶಿಯವರಿಂದ ಲಾಭ ಪಡೆದಿರುತ್ತಾರೆ.
ನೀವು ಹಲವಾರು ಜ್ಯೋತಿಷ್ಯರನ್ನು ಕೇಳಿ ನಿಮ್ಮ ಸಮಸ್ಯೆಗಳಿಗೆ ಪರಿಹಾರ ಸಿಗದೆ ನೊಂದಿದ್ದರೆ ಅಂತಹ ಯಾವುದೇ ಕಠಿಣ ಸಮಸ್ಯೆಗಳಿದ್ದರು ಪರಿಹಾರ ಶತಸಿದ್ಧ.
ನಿಮ್ಮ ಸಮಸ್ಯೆಗಳನ್ನು ಗುಪ್ತವಾಗಿ ಇಡಲಾಗುವುದು.
ಆಫೀಸ : ಧಮ್ಮಣಗಿ ಪ್ರೆಸ್ಟೀಜ್ ಪ್ಲಾಜಾ ಎಫ್ 13, ಹೋಟೆಲ ಆಯೋಧ್ಯ ಪಕ್ಕದಲ್ಲಿ, ಹಳೇ ಬಸ್‌ಸ್ಟ್ಯಾಂಡ್ ಎದುರು, ಹುಬ್ಬಳ್ಳಿ.
ಮನೆ: ಶ್ರೀ ಶ್ರೀನಿವಾಸ ಅನುಗ್ರಹ ಪಿ.ಎನ್.ಟಿ. ಕಾಲನಿ, ಹೇಮಂತನಗರ, ಕೇಶ್ವಾಪುರ, ಹುಬ್ಬಳ್ಳಿ-23.
0836-2282265
E-mail: mbjoshiastro@gmail.com